
# ದೈತ್ಯರಿಗೆ ಸವಾಲು ಶ್ರೀಕಾಂತ್




**ಏಳು ವರ್ಷಗಳಿಂದ ವಿಶ್ವದ ಬ್ಯಾಡ್ಮಿಂಟನ್‌ನಲ್ಲಿ ಮಿಂಚುತ್ತಿರುವ ಭಾರತದ ಕಿದಂಬಿ ಶ್ರೀಕಾಂತ್, ದೈತ್ಯ ಪ್ರತಿಭೆಗಳನ್ನು ಮಣಿಸುವ ಮೂಲಕವೇ ಸುದ್ದಿ ಮಾಡುತ್ತಿದ್ದಾರೆ. ಭಾರತಕ್ಕೆ ಕೆಲವು 'ಮೊದಲು'ಗಳನ್ನು ಕಾಣಿಕೆಯಾಗಿ ನೀಡಿದ ಅವರು ಇದೀಗ ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಸರಣಿಯಲ್ಲೂ ಅಪರೂಪದ ಸಾಧನೆ ಮಾಡಿದ್ದಾರೆ.**

■ **ವಿಕ್ರಂ ಕಾಂತಿಕೆರೆ**

**ಜೂ**ನ್ ಮೂರನೇ ವಾರಾಂತ್ಯದಲ್ಲಿ ನಡೆದ ಆಸ್ಟ್ರೇಲಿಯಾ ಓಪನ್ ಸರಣಿಯ ಫೈನಲ್ ಪಂದ್ಯದಲ್ಲಿ ಭಾರತದ ಕಿದಂಬಿ ಶ್ರೀಕಾಂತ್ ವಿಶ್ವ ಚಾಂಪಿಯನ್ ಚೆನ್ ಲಾಂಗ್ ಎದುರು ನಿಂತಾಗ, ಜಯ ಗಳಿಸುವುದು ಕಷ್ಟಸಾಧ್ಯ ಎಂದೇ ಬ್ಯಾಡ್ಮಿಂಟನ್ ಪ್ರಿಯರು ಲೆಕ್ಕ ಹಾಕಿದ್ದರು. ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದು ಬೀಗುತ್ತಿದ್ದ ಚೀನಾದ ಈ ಬಲಿಷ್ಠ ಆಟಗಾರನೊಂದಿಗೆ ಈ ಹಿಂದೆ ಐದು ಬಾರಿ ಮುಖಾಮುಖಿಯಾದಾಗಲೂ ಸೋಲು ಕಂಡಿದ್ದ ಶ್ರೀಕಾಂತ್, 45 ನಿಮಿಷಗಳ ಸೆಣಸಾಟದಲ್ಲಿ ವಿಶ್ವದ ಆರನೇ ಕ್ರಮಾಂಕದ ಆಟಗಾರ 11ನೇ ಕ್ರಮಾಂಕದ ಭಾರತೀಯನ ಎದುರು ಮಂಡಿಯೂರಿದರು.

ಕಳೆದ ಬಾರಿ ಈ ಟೂರ್ನಿಯ ನಾಲ್ಕರ ಘಟ್ಟದಲ್ಲಿ ಸೋಲುಂಡು ಮರಳಿದ ಶ್ರೀಕಾಂತ್ ಈ ಬಾರಿ ಪ್ರಶಸ್ತಿಗೆ ಮುತ್ತು ನೀಡಿ ಸಂಭ್ರಮಿಸಿದರು. ಈ ಟೂರ್ನಿಯ ಫೈನಲ್ ಪ್ರವೇಶಿಸಿದಾಗಲೇ ಶ್ರೀಕಾಂತ್ ದಾಖಲೆಯೊಂದನ್ನು ಸರಿಗಟ್ಟಿದ್ದರು. ನಿರಂತರ ಮೂರು ಸೂಪರ್ ಸೀರೀಸ್‌ಗಳಲ್ಲಿ ಫೈನಲ್‌ಗೆ ಪ್ರವೇಶಿಸಿದ ವಿಶ್ವದ ಆರನೇ ಆಟಗಾರ ಎಂಬ ಶ್ರೇಯ ಅವರಿಗೆ ಒಲಿದಿತ್ತು.

ಕಳೆದ ಏಪ್ರಿಲ್‌ನಲ್ಲಿ ನಡೆದ ಸಿಂಗಪುರ ಓಪನ್ ಮತ್ತು ಈ ತಿಂಗಳ ಎರಡನೇ ವಾರದಲ್ಲಿ ನಡೆದ ಇಂಡೊನೇಷ್ಯಾ ಓಪನ್‌ಗಳಲ್ಲಿ ಫೈನಲ್ ಪ್ರವೇಶಿಸಿದ್ದ ಅವರು ಹೊಸ ಮೈಲಿಗಲ್ಲು ಸ್ಥಾಪಿಸಿದ್ದರು. ಸಿಂಗಪುರ ಓಪನ್‌ನಲ್ಲಿ ತಮಗಿಂತ ಮೇಲಿನ ಕ್ರಮಾಂಕದ ಸಾಯ್ ಪ್ರಣೀತ್ ಎದುರು ಸೋಲುಂಡಿದ್ದರೂ ಈ ಟೂರ್ನಿಯಲ್ಲಿ ಮೊದಲ ಬಾರಿ ಫೈನಲ್‌ಗೆ ತಲುಪಿದ ಭಾರತದ 'ಜೋಡಿ' ಎಂಬ ಖ್ಯಾತಿಗೆ ತಮ್ಮ ಹೆಸರನ್ನೂ ಸೇರಿಸಿಕೊಂಡರು. ಇಂಡೊನೇಷ್ಯಾ ಓಪನ್‌ನಲ್ಲಿ ಕಸುಮಾಸ ಸಕಾಯ್ ಅವರನ್ನು

**ಪ್ರಮುಖ ಆಟಗಾರರ ಎದುರು ಶ್ರೀಕಾಂತ್ ಬಲಾಬಲ**

| ಆಟಗಾರ | ದೇಶ | ಜಯ | ಸೋಲು |
|---|---|---|---|
| ಲೀ ಚಾಂಗ್ ವೀ | ಮಲೇಷ್ಯಾ | 0 | 4 |
| ಲ್ಯೂ ಡಾರೆನ್ | ಮಲೇಷ್ಯಾ | 0 | 2 |
| ಲಿನ್ ಡ್ಯಾನ್ | ಚೀನಾ | 1 | 3 |
| ಚೆನ್ ಲಾಂಗ್ | ಚೀನಾ | 1 | 5 |
| ಕ್ಸ್ಯು ಸಾಂಗ್ | ಚೀನಾ | 2 | 1 |
| ಟಿಯಾನ್ ಹೊಯ್ | ಚೀನಾ | 1 | 6 |
| ಜಾನ್ ಜಾರ್ಜೆನ್ಸನ್ | ಡೆನ್ಮಾರ್ಕ್ | 2 | 2 |
| ಹನ್ಸ್ ಕ್ರಿಸ್ಟಿಯನ್‌ವಿಟಿಂಗುಸ್ | ಡೆನ್ಮಾರ್ಕ್ | 2 | 2 |
| ವಿಕ್ಟರ್ ಅಕ್ಸೆಲ್ಸನ್ | ಡೆನ್ಮಾರ್ಕ್ | 2 | 2 |
| ಟೋಮಿ ಸುರ್ಜಿಯಾಟೊ | ಇಂಡೊನೇಷ್ಯಾ | 2 | 3 |
| ಕೆಂಟೊ ಮೊಮಟ | ಜಪಾನ್ | 3 | 5 |
| ತಕುಮ ವೇಡ | ಜಪಾನ್ | 4 | 1 |
| ಸೋನ್ ವ್ಯಾನ್ ಹೊ | ದಕ್ಷಿಣ ಕೊರಿಯಾ | 4 | 4 |
| ಗುರು ಸಾಯ್ ದತ್ | ಭಾರತ | 1 | 1 |
| ಅಜಯ್ ಜಯರಾಮ್ | ಭಾರತ | 3 | 0 |
| ಎಚ್.ಎಸ್.ಪ್ರಣಯ್ | ಭಾರತ | 2 | 1 |
| ಅರವಿಂದ ಭಟ್ | ಭಾರತ | 1 | 0 |
| ಅನೂಪ್ ಶ್ರೀಧರ್ | ಭಾರತ | 1 | 0 |
| ಸಾಯ್ ಪ್ರಣೀತ್ | ಭಾರತ | 2 | 5 |
| ಪರುಪಳ್ಳಿ ಕಶ್ಯಪ್ | ಭಾರತ | 1 | 2 |